ಎಂ.ವಿ.ಸಿ. ನಂಃ 2/2022, P.W.-1

**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

ದಿನಾಂಕಃ15.05.2026 ಸಾಕ್ಷಿಯನ್ನು ಮಧ್ಯಂತರ ಅರ್ಜಿಯ ಮೇಲೆ ಮಾಡಲಾದ ಆದೇಶದ ಮೇರೆಗೆ ಪುನಃ ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ **ಮುಖ್ಯ ವಿಚಾರಣೆ ಃ** ಅರ್ಜಿದಾರರ ಪರ **ವಕೀಲರಿಂದಃ**

ನಾನು ಫಾದರ್ ಮುಲ್ಲರ್ ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ಕೇಸ್ ಶೀಟ್, ಸಿಸಿ 1961-21 ರ ವ್ಯವಹರಣೆಗೆ ಸಂಬಂಧಿಸಿದ ಆದೇಶ ಪುಟಗಳು, ಸಿಸಿ 1961-21 ರಲ್ಲಿ ಮಾಡಲಾದ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-13 ರಿಂದ 15 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಮುಂದುವರೆದ ಪಾಟೀ ಸವಾಲು ಃ 2ನೇ ಎದುರುದಾರರ ಪರಃ ಶ್ರೀ ಯುಎಸ್‌ಎನ್ ವಕೀಲರಿಂದಃ

ನಿಪಿ13ರಲ್ಲಿ ಏನೆಲ್ಲಾ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ15 ತೀರ್ಪಿನಲ್ಲಿ ಏನೆಲ್ಲಾ ಬರೆಯಲಾಗಿದೆ ಎಂದು ಗೊತ್ತಿಲ್ಲ. ಬಂಟ್ವಾಳ ನ್ಯಾಯಾಲಯದಲ್ಲಿ ಸಿಸಿ 1961-2021ರಲ್ಲಿ ಕಂಟೆಸ್ಟ್ ಮಾಡಲು ಕಾರಣ ನಾನು ನಿರಪರಾಧಿ ಎಂದು ರುಜುವಾತುಪಡಿಸಲು. ಅಪಘಾತದ ಎದುರು ಬರುತ್ತಿದ್ದ ಬೈಕಿನ ಸವಾರನ ತಪ್ಪಿನಿಂದ ಆಗಿದೆ. ಈ ವಿಚಾರವನ್ನು ಈ ಕೇಸಿನಲ್ಲಿ ನಾನು ಹೇಳಿದ್ದೇನೆ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

**ಎಂ.ವಿ.ಸಿ. ನಂಃ 2/2022, P.W.-1**

ಓ.ಹೇ.ಕೇ.ಸ.ಇದೆ

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು